ಸಂಖ್ಯೆ: ಇಸಿಸಿ/18/ಇತರೆ/2009

ಅಬಕಾರಿ ಆಯುಕ್ತರ ಕಛೇರಿ,
ಒಕ್ಕಲಿಗರ ಭವನ, ಕೆ.ಆರ್.ಸಿ ವೃತ್ತ,
ಬೆಂಗಳೂರು, ದಿನಾಂಕ:16-10-2009.

**ಸುತ್ತೋಲೆ**

ವಿಷಯ: ಪ್ರಭಾರ ವ್ಯವಸ್ಥೆ ಮಾಡುವ ಬಗ್ಗೆ.

** ** **

ಇಲಾಖೆಯಲ್ಲಿ ಖಾಲಿ ಇರುವ ಅಬಕಾರಿ ನಿರೀಕ್ಷಕರ, ಉಪ ನಿರೀಕ್ಷಕರ ಹುದ್ದೆಗಳಿಗೆ ಜಿಲ್ಲೆಯ ಅಬಕಾರಿ ಉಪ ಆಯುಕ್ತರು ಪ್ರಭಾರ ವ್ಯವಸ್ಥೆ ಮಾಡುತ್ತಿದ್ದು, ಪ್ರಭಾರ ವ್ಯವಸ್ಥೆ ಮಾಡಿರುವ ಪ್ರಕರಣಗಳಲ್ಲಿ ಈ ಕೆಳಕಂಡ ಅಂಶಗಳನ್ನು ಗಮನಿಸಲಾಗಿದೆ.

1. ವಲಯ ಅಬಕಾರಿ ನಿರೀಕ್ಷಕರ ಹುದ್ದೆಗೆ ಅದೇ ವಲಯದ ಅಬಕಾರಿ ಉಪ ನಿರೀಕ್ಷಕರನ್ನು ಪ್ರಭಾರದಲ್ಲಿರಿಸದೆ ಬೇರೆ ವಲಯದ ಅಬಕಾರಿ ಉಪ ನಿರೀಕ್ಷಕರನ್ನು ಪ್ರಭಾರದಲ್ಲಿರಿಸುವುದು.
2. ಒಂದಕ್ಕಿಂತ ಹೆಚ್ಚಿನ ಹುದ್ದೆಗಳಿಗೆ ಪ್ರಭಾರದಲ್ಲಿರಿಸುವುದು.
3. ಪ್ರಭಾರದಲ್ಲಿರಿಸಿದ ನಂತರ ಪದೇ ಪದೇ ಪ್ರಭಾರವನ್ನು ಬದಲಾವಣೆ ಮಾಡುವುದು.
4. ಪ್ರಭಾರ ವ್ಯವಸ್ಥೆ ಮಾಡುವಾಗ, ಪ್ರಭಾರ ವ್ಯವಸ್ಥೆ ಮಾಡಬೇಕಾದ ವೃಂದದ ತಕ್ಷಣದ ಕೆಳ ವೃಂದದ (Feeder Cadre) ನೌಕರರನ್ನು ಬಿಟ್ಟು ಬೇರೆ ವೃಂದದ ನೌಕರರನ್ನು ಪ್ರಭಾರದಲ್ಲಿರಿಸುವುದು. (ಉದಾ: ಅಬಕಾರಿ ಅಧೀಕ್ಷಕ ಹುದ್ದೆಗೆ ಅಬಕಾರಿ ಉಪ ನಿರೀಕ್ಷಕರನ್ನು ಪ್ರಭಾರದಲ್ಲಿರಿಸುವುದು).

ಈ ತರಹದ ಪ್ರಭಾರ ವ್ಯವಸ್ಥೆಯಿಂದ ಸಿಬ್ಬಂದಿ ವರ್ಗದಲ್ಲಿ ಮನೋಸ್ಥೈರ್ಯ ಕುಗ್ಗಿಸಿ ಕಾರ್ಯ ಕ್ಷಮತೆ, ಕಾರ್ಯದಕ್ಷತೆ ಕುಂಠಿತಗೊಳಿಸುವುದಲ್ಲದೆ, ಆಡಳಿತಾತ್ಮಕ ಹಿತದೃಷ್ಟಿಯಿಂದಲೂ ಸಹ ಈ ವ್ಯವಸ್ಥೆ ಸರಿ ಎನಿಸುವುದಿಲ್ಲ.

ಮೇಲೆ ಉಲ್ಲೇಖಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಆಡಳಿತ ದೃಷ್ಟಿಯಿಂದ ಜಾರಿ ಕಾರ್ಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಮತ್ತು ಸಿಬ್ಬಂದಿಯ ಕಾರ್ಯನಿರ್ವಹಣೆ ಉತ್ತಮ ಪಡಿಸಲು ಪ್ರಭಾರ ವ್ಯವಸ್ಥೆಯನ್ನು ಮಾಡುವಾಗ ಈ ಕೆಳಕಂಡ ಸೂಚನೆಗಳನ್ನು ಪಾಲಿಸಲು ತಿಳಿಸಿದೆ.

1. ಯಾವುದೇ ಹುದ್ದೆಗೆ ಪ್ರಭಾರ ವ್ಯವಸ್ಥೆ ಮಾಡುವಾಗ ಅದೇ ಕಛೇರಿಯಲ್ಲಿರುವ/ಅದೇ ಕೇಂದ್ರಸ್ಥಾನದಲ್ಲಿರುವ, ಅದೇ ವೃಂದದ ಇಲ್ಲವೇ ತಕ್ಷಣದ ಕೆಳ ವೃಂದ (Feeder Cadre) ನೌಕರರನ್ನು ಅಥವಾ ಅದೇ ಕೇಂದ್ರಸ್ಥಾನದಲ್ಲಿರುವ ಉನ್ನತ ವೃಂದದ (Higher Cadre) ಅಧಿಕಾರಿ/ನೌಕರರನ್ನು ಪ್ರಭಾರದಲ್ಲಿರಿಸಲು ಕ್ರಮ ಕೈಗೊಳ್ಳುವುದು.

ರವಾನಿಸಿದೆ ............
ದಿನಾಂಕ........ 23/10/09

2. ಅನಿವಾರ್ಯ ಕಾರಣಗಳನ್ನು ಹೊರತುಪಡಿಸಿ ಒಂದಕ್ಕಿಂತ ಹೆಚ್ಚಿನ ಹುದ್ದೆಗಳಿಗೆ ಪ್ರಭಾರ ವ್ಯವಸ್ಥೆ ಮಾಡತಕ್ಕದ್ದಲ್ಲ.

3. ಈಗಾಗಲೇ ಮಾಡಿರುವ ಪ್ರಭಾರ ವ್ಯವಸ್ಥೆ, ಮೇಲಿನ ಸೂಚನೆಗಳಿಗೆ ವ್ಯತಿರಿಕ್ತವಾಗಿದ್ದಲ್ಲಿ ಮತ್ತು ಆ ವ್ಯವಸ್ಥೆ ಮುಂದುವರೆಸಬೇಕಾದ ಅಗತ್ಯವಿದ್ದಲ್ಲಿ, ಆ ಬಗ್ಗೆ ವರದಿ ನೀಡಿ ಅನುಮೋದನೆ ಪಡೆಯುವುದು.

4. ಒಮ್ಮೆ ಪ್ರಭಾರ ವ್ಯವಸ್ಥೆ ಮಾಡಿದ ನಂತರ ಬದಲಾವಣೆ ಮಾಡತಕ್ಕದ್ದಲ್ಲ. ಪ್ರಭಾರ ವ್ಯವಸ್ಥೆ ಬದಲಾವಣೆ ಮಾಡಲೇಬೇಕಾದ ಸಂದರ್ಭವಿದ್ದಲ್ಲಿ ಅಬಕಾರಿ ಆಯುಕ್ತರ ಪೂರ್ವಾನುಮತಿ ಪಡೆದು ಬದಲಾವಣೆ ಮಾಡುವುದು.

5. ಪ್ರಭಾರದಲ್ಲಿರುವ ನೌಕರರು ತಮ್ಮ ಮೂಲ ಹುದ್ದೆ ಹಾಗೂ ಪ್ರಭಾರದಲ್ಲಿರುವ ಹೆಚ್ಚುವರಿ ಹುದ್ದೆಯ ಕರ್ತವ್ಯಗಳನ್ನು ಸಮರ್ಪಕವಾಗಿ ನಿರ್ವಹಿಸುತ್ತಿರುವ ಬಗ್ಗೆ ನಿಗಾ ವಹಿಸುವುದು.

ಈ ಸೂಚನೆಗಳನ್ನು ಕಡ್ಡಾಯವಾಗಿ ಪಾಲನೆ ಮಾಡುವುದು.

ಅಬಕಾರಿ ಆಯುಕ್ತರು

**ಪ್ರತಿಯನ್ನು ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ:**

1. ಅಬಕಾರಿ ಜಂಟಿ ಆಯುಕ್ತರು, ರಾಜ್ಯ ವಿಚಕ್ಷಣ ದಳ, ಬೆಂಗಳೂರು
2. ಅಬಕಾರಿ ಜಂಟಿ ಆಯುಕ್ತರು (ಜಾರಿ ಮತ್ತು ತನಿಖೆ), ಎಲ್ಲಾ ವಿಭಾಗಗಳು.
3. ಅಬಕಾರಿ ಉಪ ಆಯುಕ್ತರು, ರಾಜ್ಯದ ಎಲ್ಲಾ ಜಿಲ್ಲೆಗಳು.
4. ರಾಜ್ಯದ ಎಲ್ಲಾ ಉಪವಿಭಾಗಗಳ ಅಬಕಾರಿ ಉಪ ಅಧೀಕ್ಷಕರುಗಳಿಗೆ.
5. ಬೆಂಗಳೂರು ನಗರ ಜಿಲ್ಲೆಯ ಇ.ಐ.ಬಿಯ ಅಬಕಾರಿ ಅಧೀಕ್ಷಕರುಗಳಿಗೆ.
6. ಕಛೇರಿ ಪ್ರತಿ/ಹೆಚ್ಚಿನ ಪ್ರತಿ.